
# ‘ಪ್ರಬುದ್ಧ ಭಾರತ’ದ ೧೨೫ನೇ ವಾರ್ಷಿಕೋತ್ಸವ ಆನ್‌ಲೈನ್ ಕಾರ್ಯಕ್ರಮ

ರಾಮಕೃಷ್ಣ ಸಂಘದ ಆಂಗ್ಲ ಮಾಸಪತ್ರಿಕೆ **‘ಪ್ರಬುದ್ಧ ಭಾರತ’**ದ ೧೨೫ನೇ ವಾರ್ಷಿಕೋತ್ಸವವನ್ನು ಮಾಯಾವತಿಯಲ್ಲಿರುವ ಅದ್ವೈತ ಆಶ್ರಮವು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಈ ಪ್ರಯುಕ್ತ ಪತ್ರಿಕೆಯ ಪ್ರಚಾರವನ್ನು ವ್ಯಾಪಕಗೊಳಿಸುವ ನಿಟ್ಟಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಿದೆ.

ಮೊದಲನೆಯದಾಗಿ, ೨೦೨೧ರ ಜನವರಿ ವಿಶೇಷ ಸಂಚಿಕೆಯನ್ನು ಈ ಐತಿಹಾಸಿಕ ವರ್ಷದ ಆಚರಣೆಗಾಗಿ ಮೀಸಲಾಗಿಟ್ಟಿದ್ದು, ‘Prabuddha Bharata-125 Years: Glimpses from the Glorious Past’ ಎಂಬ ಶೀರ್ಷಿಕೆಯೊಂದಿಗೆ ಪ್ರಕಟಿಸಲಾಯಿತು.

‘ಪ್ರಬುದ್ಧ ಭಾರತ’ದ ಎಲ್ಲ ಸಂಚಿಕೆಗಳನ್ನು ವೆಬ್‌ಸೈಟಿನ ಮೂಲಕ ಒದಗಿಸಲು, ಮೊಬೈಲ್ ಮೂಲಕ ಲಭ್ಯವಾಗಿಸಲು, ಹಾಗೂ ಎರಡು ಪುಸ್ತಕಗಳ ಮೂಲಕ ಆಯ್ದು ಲೇಖನಗಳನ್ನು ಒದಗಿಸಲು ಯೋಜಿಸಿದೆ. ಹೆಚ್ಚು ಜನರಿಗೆ ಪತ್ರಿಕೆಯ ಬಗ್ಗೆ ತಿಳಿಸಿಕೊಡಲು ಸಾಮಾಜಿಕ ಮಾಧ್ಯಮಗಳನ್ನು ಕೂಡ ಬಳಸಿಕೊಳ್ಳಲಾಗಿದೆ.




‘ಪ್ರಬುದ್ಧ ಭಾರತ’ದ ಪ್ರಮುಖ ಮೈಲಿಗಲ್ಲಾದ ಈ ಸಂದರ್ಭವನ್ನು ಅರ್ಥವತ್ತಾಗಿ ಆಚರಿಸಲು ಅನುವಾಗುವಂತೆ, ೨೦೨೧ರ ಜನವರಿ ೩೧ರಂದು ಸಂಜೆ ೩.೦೦ರಿಂದ ಅದ್ವೈತ ಆಶ್ರಮವು ಅಂತರ್ಜಾಲದ ಮೂಲಕ ವಿಶೇಷ ಕಾರ್ಯಕ್ರಮವೊಂದನ್ನು ಬಿತ್ತರಿಸಿತು.

‘ಪ್ರಬುದ್ಧ ಭಾರತ’ದ ಐತಿಹಾಸಿಕ ಮಹತ್ವವನ್ನು ವಿವರಿಸುವ ವಿಡಿಯೋ ಪ್ರಸ್ತುತಿಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅದ್ವೈತ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಶುದ್ಧಿದಾನಂದರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಬಳಿಕ ಭಾರತದ ಪ್ರಧಾನ ಮಂತ್ರಿಗಳಾದ ಗೌರವಾನ್ವಿತ ಶ್ರೀ ನರೇಂದ್ರ ಮೋದಿಯವರ ವೀಡಿಯೋ ಸಂದೇಶವನ್ನು ಬಿತ್ತರಿಸಲಾಯಿತು. ಅವರು ಮಾತನಾಡುತ್ತ, “ಪ್ರಬುದ್ಧ ಭಾರತವು ಸಾಧಾರಣ ಪತ್ರಿಕೆಯಲ್ಲ; ದೇಶದ ಮಹಾನ್ ಧ್ಯೇಯವನ್ನು ಪ್ರಕಟಪಡಿಸುವಲ್ಲಿ ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ಒಂದು ಮಹತ್ವದ ಮಾಧ್ಯಮ” ಎಂದರು.

ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಮಹಾರಾಜ್ ಅವರು ‘ಪ್ರಬುದ್ಧ ಭಾರತ’ದ ಇತಿಹಾಸವನ್ನು ವಿಸ್ತೃತವಾಗಿ ವಿವರಿಸಿದರು. ಮಾಯಾವತಿ ಆಶ್ರಮದ ಮಹತ್ವ ಮತ್ತು ಹಿಂದಿನ ಸಂನ್ಯಾಸಿಗಳು ಈ ಪತ್ರಿಕೆಯ ಬೆಳವಣಿಗೆಗೆ ವಹಿಸಿದ ಅಪಾರ ಶ್ರಮವನ್ನು ಕುರಿತು ಮಾತನಾಡಿದರು.

ರಾಮಕೃಷ್ಣ ಮಹಾಸಂಘದ ಸಹ ಕಾರ್ಯದರ್ಶಿಗಳಾದ ಸ್ವಾಮಿ ಬೋಧಸಾರಾನಂದಜಿಯವರು ಮಾತನಾಡುತ್ತ, ಅದ್ವೈತ ಆಶ್ರಮವು ಪ್ರಕಟಿಸಿದ ಅನೇಕ ಪುಸ್ತಕಗಳು ಮೂಲತಃ ‘ಪ್ರಬುದ್ಧ ಭಾರತ’ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಾಗಿದ್ದು, ಅದ್ವೈತ ಆಶ್ರಮ ಪ್ರಕಾಶನ ಸಂಸ್ಥೆಗೆ ಪತ್ರಿಕೆಯು ನೀಡಿದ ಕೊಡುಗೆ ಅಪಾರ ಎಂದರು.

ಇದರೊಂದಿಗೆ RKMVERIಯ ಕುಲಾಧಿಪತಿಗಳಾದ ಸ್ವಾಮಿ ಆತ್ಮಪ್ರಿಯಾನಂದಜಿ, ಪ್ರಸಿದ್ಧ ಲೇಖಕರಾದ ಡಾ ಮಕರಂದ ಆರ್. ಪರಾಂಜಪೆ, ಸ್ವಾಮಿ ವಿವೇಕಾನಂದರನ್ನು ಮತ್ತು ‘ಪ್ರಬುದ್ಧ ಭಾರತ’ದ ಇತಿಹಾಸವನ್ನು ಕುರಿತು ಸಂಶೋಧನೆ ಮಾಡಿರುವ ಶ್ರೀ ಸೋಮನಾಥ್ ಮುಖರ್ಜಿ ಮುಂತಾದವರು ಈ ಸಂದರ್ಭದಲ್ಲಿ ವಿಡಿಯೋ-ಭಾಷಣಗಳನ್ನು ಮಾಡಿದರು.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಅವರು ತಮ್ಮ ಭಾಷಣದಲ್ಲಿ ‘ಪ್ರಬುದ್ಧ ಭಾರತ’ವನ್ನು ಕುರಿತ ಸ್ಫೂರ್ತಿದಾಯಕವಾದ ಸಂಗತಿಗಳನ್ನು ವಿವರಿಸಿದರು. ಕೊನೆಯಲ್ಲಿ, ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿಯವರ ಆಶೀರ್ವಚನವನ್ನು ಬಿತ್ತರಿಸಲಾಯಿತು.

‘ಪ್ರಬುದ್ಧ ಭಾರತ’ದ ಸಂಪಾದಕರಾದ ಸ್ವಾಮಿ ವೀರೇಶಾನಂದರು ಸಮಾಪನ ಭಾಷಣ ಮಾಡಿ, ವಂದನಾರ್ಪಣೆ ಮಾಡುವುದರೊಂದಿಗೆ ಈ ಐತಿಹಾಸಿಕ ಕಾರ್ಯಕ್ರಮವು ಸಮಾಪ್ತವಾಯಿತು.

Managing Editor : Swami Muktidananda  Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020